
ಸಿದ್ದೇಶ್ ಸಣ್ಣಗಿರಿ ಕೊಟ್ಟೂರು

# ಸುಬ್ಬನ ಕೊಳಲು



ಒಂದು ಹಳ್ಳಿ, ಅಲ್ಲೊಬ್ಬ ಸೋಮಾರಿಯಿದ್ದ. ಅವನ ಹೆಸರು ಸುಬ್ಬ. ಹೊಲಗದ್ದೆಗಳಲ್ಲಿ ಕೆಲಸ ಮಾಡುವ ಬದಲು ಅವನು ಯಾವಾಗಲೂ ಹುಲ್ಲುಗಾವಲಿನಲ್ಲಿ ಕುಳಿತು ಕೊಳಲು ನುಡಿಸುತ್ತಿದ್ದ.

ಒಂದು ದಿನ ಅವನು ಕೊಳಲೂದುತ್ತಿರುವಾಗ ಎದುರಿಗೆ ಹಾವೊಂದು ನರ್ತಿಸುವುದನ್ನು ಕಂಡ. ಸುಬ್ಬನಿಗೆ ಭಯ ಆಯಿತು. ಅವನು ಕೊಳಲೂದುವುದನ್ನು ನಿಲ್ಲಿಸಿದ. ಹಾವು ತನ್ನ ಹುತ್ತದೊಳಗೆ ಹೋಗಿ ಒಂದು ಬಂಗಾರದ ನಾಣ್ಯವನ್ನು ಕಚ್ಚಿಕೊಂಡು ಬಂದು ಅವನ ಮುಂದೆ ಇಟ್ಟಿತು. ಸುಬ್ಬ ಮನೆಗೆ ಹೋಗಿ ಹೆಂಡತಿಗೆ ನಾಣ್ಯವನ್ನು ತೋರಿಸಿದ. ಮರುದಿನವೂ ಹಾವು ಒಂದು ನಾಣ್ಯವನ್ನು ಕೊಟ್ಟಿತು. ಹೀಗೆ ದಿನಂಪ್ರತಿ ನಡೆಯಿತು. ಸುಬ್ಬ ಐಶ್ವರ್ಯವಂತನಾದ.

ಒಂದು ದಿನ ಸುಬ್ಬ ಕೊಳಲೂದಿದಾಗ ಹಾವು ನರ್ತಿಸಲಿಲ್ಲ. ಅದು ಮೆಲ್ಲನೆ ಹೇಳಿತು: 'ಸುಬ್ಬ, ನಾನು ಸಾಯ್ತಿದೀನಿ, ನನ್ನನ್ನು ತೆಗೆದುಕೊಂಡು ಹೋಗಿ ನಿನ್ನ ಮನೆಯ ಹಿತ್ತಲಲ್ಲಿ ಹೂತುಬಿಡು. ಆ ಜಾಗದಲ್ಲಿ ಸೊಗಸಾದ ಮರ ಹುಟ್ಟುತ್ತೆ. ಅದರಲ್ಲಿ ಅಪರೂಪದ ಕಿತ್ತಳೆ ಹಣ್ಣುಗಳು ಬಿಡುತ್ತವೆ. ನೀನು ಕೊಳಲಿನಲ್ಲಿ ಸಂತೋಷದಾಯಕ ರಾಗವನ್ನು ನುಡಿಸಿದರೆ ಮರದಲ್ಲಿ ಕಿತ್ತಳೆ ಹಣ್ಣುಗಳೂ, ದುಃಖದಾಯಕ ರಾಗವನ್ನು ನುಡಿಸಿದರೆ ಸೇಬುಹಣ್ಣುಗಳೂ ಬಿಡುತ್ತವೆ.'

ಅದರಂತೆಯೇ ಸತ್ತ ಹಾವನ್ನು ಸುಬ್ಬ ತನ್ನ ಮನೆಯ ಹಿತ್ತಲಲ್ಲಿ ಹೂತುಬಿಟ್ಟ. ಮರುದಿನ ಬೆಳಗ್ಗೆ ಕಿತ್ತಳೆ ಹಣ್ಣುಗಳು ತೂಗುತ್ತಿದ್ದ ಮರವನ್ನು ಕಂಡ. ಅವನ ಸಂತೋಷಕ್ಕೆ ಪಾರವಿಲ್ಲವಾಯಿತು.

ಒಂದು ದಿನ ಆ ಊರಿಗೊಬ್ಬ ಹಡಗಿನ ಕಪ್ತಾನ ಬಂದ. ಅವನು ಅಪರೂಪದ ಕಿತ್ತಳೆ ಹಣ್ಣುಗಳನ್ನು ಕಂಡು ವಿಸ್ಮಯಪಟ್ಟ. ಆಗ ಕಪ್ತಾನನಿಗೆ ಮೋಸಮಾಡಿ ಹಣ ಸಂಪಾದಿಸಬೇಕೆಂದು ಸುಬ್ಬ ಯೋಚಿಸಿದ. ಅವನು ಕಪ್ತಾನನಿಗೆ. 'ಆ ಮರ ನನ್ನದು. ಆ ಮರದಲ್ಲಿರೋವು ಕಿತ್ತಳೆ ಹಣ್ಣುಗಳಲ್ಲ, ಸೇಬು ಹಣ್ಣುಗಳು!' ಎಂದ. ಕಪ್ತಾನ ಸೋಜಿಗದಿಂದ, 'ಇದೇನಪ್ಪ ಹೀಗೆ ಹೇಳ್ತೀಯಾ? ಕಿತ್ತಳೆಗೂ ಸೇಬಿಗೂ ವ್ಯತ್ಯಾಸ ತಿಳಿಯದೇ ಇರುವಷ್ಟು ಮೂಢನೇ ನಾನು? ಬೇಕಾದರೆ ಪಂದ್ಯ ಕಟ್ಟೋಣ!' ಎಂದ.

'ಆಗಲಿ, ಆ ಮರದಲ್ಲಿ ಕಿತ್ತಳೆಯಿದ್ದರೆ ನಾನು ನಿನಗೆ ನೂರು ವರಹ ಕೊಡ್ತೀನಿ. ಸೇಬಿದ್ದರೆ ನೀನು ನನಗೆ ಅಷ್ಟೇ ಹಣ ಕೊಡಬೇಕು' ಎಂದ ಸುಬ್ಬ. ಸುಬ್ಬ ಬೆಳಗಾಗೆದ್ದು ಕೊಳಲಿನಲ್ಲಿ ದುಃಖದಾಯಕ ಸ್ವರ ನುಡಿಸಿದ. ಮರದ ತುಂಬಾ ಸೇಬು ಕಂಡವು. ಕಪ್ತಾನ ಬಂದು ಅದನ್ನು ಕಂಡು ಬೆರಗುಗೊಂಡ. ಪಣದ ಹಣ ನೂರು ವರಹ ತೆತ್ತು ಹೋದ.